ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೨೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೈದನೆಯ ಅಧಿವೇಶನ**

**ಬುಧವಾರ, ದಿನಾಂಕ: ೨೩ನೇ ಜುಲೈ ೨೦೧೪**

---

**ಸಮೂಹ – III**

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಕಾರ್ಮಿಕರ ಕಲ್ಯಾಣ ಮತ್ತು ಭದ್ರತೆ

**ಶ್ರೀ ಪಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩೧ (೧೪೭೨) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಕೂಲಿ ಕಾರ್ಮಿಕರಿಗೆ ರಕ್ಷಣೆ, ಭದ್ರತೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುತ್ತಿದೆಯೇ ; ಒದಗಿಸುತ್ತಿದ್ದಲ್ಲಿ, ಯಾವ ರೀತಿಯದ್ದೆಂದು ವಿವರಿಸುವುದು ; ಒದಗಿಸದಿದ್ದಲ್ಲಿ, ಕಾರಣ ತಿಳಿಸುವುದು ;

(ಆ) ಕಾರ್ಮಿಕ ವರ್ಗದ ಒಂದು ಭಾಗವಾಗಿರುವ ಹಮಾಲಿಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹವೇನು ತಿಳಿಸುವುದು ; ಹಮಾಲಿಗಳಿಗೆ ಹಾಲಿ

ಯಾವ ಪ್ರಮಾಣದಲ್ಲಿ ಸರ್ಕಾರ ಕೂಲಿಯನ್ನು ನಿರ್ಧಾರ ಮಾಡಿದೆ ; ಪ್ರತಿ ಮೂಟೆಗೆ ನೀಡುವ ಹಮಾಲಿ ಎಷ್ಟು ; ಹಮಾಲಿ ಮಾಡುವವರಿಗೆ ಪಿ.ಎಫ್., ಇ.ಎಸ್.ಐ. ಯಂತಹ ಜೀವನ ಭದ್ರತೆಗೆ ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಂಡಿದ್ದಲ್ಲಿ, ವಿವರಿಸುವುದು ; ಇಲ್ಲವಾದಲ್ಲಿ, ಕಾರಣ ತಿಳಿಸುವುದು ;

(ಇ) ಕಾರ್ಮಿಕರಿಗೆ ಯಾವುದೇ ರೀತಿಯ ಗುರುತು ಚೀಟಿ ಒದಗಿಸಲಾಗಿದೆಯೇ ; ಗುರುತು ಚೀಟಿಯ ವಿಷಯದಲ್ಲಿ ಸರ್ಕಾರದ ನಿಲುವೇನು ; ಗುರುತು ಚೀಟಿಯನ್ನು ಸರ್ಕಾರದಿಂದ ನೀಡಲಾಗುತ್ತಿದೆಯೇ ಅಥವಾ ಆಯಾಯ ಸಂಘ ಸಂಸ್ಥೆಗಳು ನೀಡುತ್ತಿವೆಯೇ ; ಕಾರ್ಮಿಕರಿಗೆ ಸಂಭವಿಸಬಹುದಾದ ಅಪಘಾತಗಳಿಗೆ ಸರ್ಕಾರದಿಂದ, ಸಂಘ ಸಂಸ್ಥೆಯಿಂದ ಪರಿಹಾರ ನೀಡಲಾಗುತ್ತಿದೆಯೇ ? (ವಿವರಿಸುವುದು)

## ವನ್ಯ ಜೀವಿಗಳ ಹಾವಳಿಗೆ ಬೆಳೆ ಪರಿಹಾರ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩೨ (೧೮೪೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೦೪ ರಲ್ಲಿ ಅಂದರೆ ಹತ್ತು ವರ್ಷಗಳ ಹಿಂದೆ ಕಾಡು ಪ್ರಾಣಿಗಳ ಹಾವಳಿಗೆ ನಾಶವಾಗುತ್ತಿದ್ದ ರೈತನ ಯಾವ ಯಾವ ಬೆಳೆಗೆ ಎಷ್ಟು ಪರಿಹಾರವನ್ನು ನೀಡಲಾಗುತ್ತಿತ್ತು ;

(ಆ) ಪ್ರಸ್ತುತ ೨೦೧೪ರಲ್ಲಿ ಅದೇ ಕಾಡು ಪ್ರಾಣಿಗಳ ಹಾವಳಿಗೆ ನಾಶವಾಗುತ್ತಿರುವ ರೈತನ ಯಾವ ಯಾವ ಬೆಳೆಗೆ ಎಷ್ಟು ಪರಿಹಾರವನ್ನು ನೀಡಲಾಗುತ್ತಿದೆ ;

(ಇ) ರಾಜ್ಯಾದ್ಯಂತ ಕಾಡು ಪ್ರಾಣಿಗಳ ಹಾವಳಿಯಿಂದಾಗಿ ನೀಡುವ ಸರಾಸರಿ ಒಂದು ವರ್ಷದ ಪರಿಹಾರದ ಹಣ ಎಷ್ಟಿರುತ್ತದೆ ;

(ಈ) ಕಾಡು ಪ್ರಾಣಿಗಳಿಂದ ಬೆಳೆ ಹಾನಿಗೆ ಒಳಗಾದ ರೈತ ಅರಣ್ಯ ಇಲಾಖೆಗೆ ತಿಳಿಸಿದ ಎಷ್ಟು ದಿನದೊಳಗೆ ಪರಿಹಾರವನ್ನು ನೀಡಲಾಗುತ್ತಿದೆ ;

(ಉ) ಈಗ ನೀಡುತ್ತಿರುವ ಬೆಳೆ ಪರಿಹಾರದ ಹಣ ತುಂಬಾ ಕಡಿಮೆ ಎನಿಸುವುದಿಲ್ಲವೆ ; ಪರಿಹಾರದ ಹಣವನ್ನು ಪ್ರಸ್ತುತ ಮಾರುಕಟ್ಟೆಯ ಬೆಳೆಯ ಬೆಲೆಯಂತೆ ನೀಡಬಹುದಲ್ಲವೇ ;

(ಊ) ನೀಡುತ್ತಿರುವ ಪರಿಹಾರವನ್ನು ಯಾವ ಮಾನದಂಡದಲ್ಲಿ ನೀಡಲಾಗುತ್ತಿದೆ ?

## ಕಂದಾಯ ಗ್ರಾಮಗಳಾಗಿ ತಾಂಡಾಗಳ ಪರಿವರ್ತನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩೩ (೧೮೪೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಯೋಜನೆಯಡಿ ಎಷ್ಟು ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಗುರುತಿಸಲಾಗಿದೆ ; ಅವುಗಳು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಏನು ಕ್ರಮ ಕೈಗೊಳ್ಳಲಾಗಿದೆ ; ಅದಕ್ಕಾಗಿ ತಗಲಬಹುದಾದ ವೆಚ್ಚವೆಷ್ಟು ;

(ಇ) ಇವುಗಳನ್ನು ಯಾವ ಕಾಲಮಿತಿಯಲ್ಲಿ ಘೋಷಿಸಲಾಗುವುದು ?

## ಸ್ಮಶಾನ ಭೂಮಿಯ ಅಕ್ರಮ ಒತ್ತುವರಿ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩೪ (೧೮೧೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಸ್ಮಶಾನ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸ್ಮಶಾನ ಭೂಮಿಯ ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಸ್ಮಶಾನ ಭೂಮಿ ತೆರವುಗೊಳಿಸಲು ಇದುವರೆಗೆ ಕೈಗೊಂಡಿರುವ ಕ್ರಮಗಳೇನು ; (ವಿವರವನ್ನು ಒದಗಿಸುವುದು)

(ಇ) ಪ್ರತಿಯೊಂದು ಗ್ರಾಮಕ್ಕೂ ಸ್ಮಶಾನ ಭೂಮಿ ಅವಶ್ಯವಿರುವುದರಿಂದ ಈ ನಿಟ್ಟಿನಲ್ಲಿ ಸರ್ಕಾರದ ಆಲೋಚನೆ ಏನು ? (ವಿವರ ಒದಗಿಸುವುದು)

## ಜಿಲ್ಲಾ ಕ್ರೀಡಾಂಗಣ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩೫ (೧೮೨೧) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಮನಗರ ಜಿಲ್ಲೆಗೆ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ;

(ಆ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಅಪರ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು ನಡೆಸಿರುವ ಅಕ್ರಮ ಅವ್ಯವಹಾರಗಳ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೩೩೬ (೧೮೩೭) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಲ್ಲಿ SPIU ಯೋಜನೆಯೊಂದಿಗೆ ಮುಕ್ತಾಯಗೊಳ್ಳುವ ಅಪರ ನಿರ್ದೇಶಕರ ಹುದ್ದೆಯನ್ನು ತರಬೇತಿ ಎಂದು ಸೃಷ್ಟಿಸಿ, Cabinet, DPAR, FD ಹಾಗೂ KPSC ಅನುಮತಿ ಪಡೆಯದೇ ಅನಧಿಕೃತ ಹುದ್ದೆಯಲ್ಲಿ ಅಧಿಕಾರಿಯು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಅನಧಿಕೃತವಾಗಿ, ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು ;

(ಆ) ಅಪರ ನಿರ್ದೇಶಕರು ಸುಮಾರು ೧೮೦ ಅರೆಕಾಲಿಕ JOC ಯವರನ್ನು ಗುಮಾಸ್ತರ ಹುದ್ದೆಗೆ ನೇಮಕಗೊಳಿಸುವುದರ ಬದಲಾಗಿ C & R ನಿಯಮಗಳನ್ನು ಉಲ್ಲಂಘಿಸಿ JTO ಹುದ್ದೆಗೆ ಅಕ್ರಮವಾಗಿ ನೇಮಕ ಮಾಡಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಅಕ್ರಮ ನೇಮಕಾತಿಗೆ ಕಾರಣೀಕರ್ತರಾಗಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಅಪರ ನಿರ್ದೇಶಕರು ಪ್ರಭಾರ ಆಯುಕ್ತರಾಗಿದ್ದಾಗ SCVT ಮತ್ತು ATS ಪರೀಕ್ಷೆಗಳಲ್ಲಿ ಯಾವುದೇ ತರಬೇತಿಯಿಲ್ಲದ ೪೦೦೦ ಅಭ್ಯರ್ಥಿಗಳಿಗೆ ನೇರವಾಗಿ ಪರೀಕ್ಷೆಗೆ ಹಾಜರಾಗಲು ಅಕ್ರಮ ಅವಕಾಶ ನೀಡುವ ಮೂಲಕ ಅವರ ಪರೀಕ್ಷಾ ಫಲಿತಾಂಶ ಪ್ರಕಟವಾಗದೇ ಭವಿಷ್ಯ ಅತಂತ್ರವಾಗಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಇವರ ವಿರುದ್ಧ ನಡೆಸಲಾಗಿರುವ ತನಿಖೆ ಹಾಗೂ ಕೈಗೊಂಡಿರುವ ಶಿಸ್ತು ಕ್ರಮಗಳೇನು ;

(ಈ) ಅಪರ ನಿರ್ದೇಶಕರು ಪ್ರಭಾರ ಆಯುಕ್ತರಾಗಿದ್ದ ಕೇವಲ ಎರಡು ತಿಂಗಳಲ್ಲಿ MES ಯೋಜನೆಯಡಿಯಲ್ಲಿ VTP ಕೇಂದ್ರಗಳ ನೈಜತೆಯನ್ನು ಪರಿಶೀಲಿಸದೇ ಸುಮಾರು **೬ ಕೋಟಿ** ರೂಪಾಯಿಗಳನ್ನು ಬಿಡುಗಡೆ ಮಾಡಿ ಅನುದಾನ ದುರುಪಯೋಗ ಮಾಡಿಕೊಂಡಿರುವ ಹಗರಣದ ಬಗ್ಗೆ ತನಿಖೆ ನಡೆಸಲು ನೇಮಿಸಲಾಗಿದ್ದ ನಿವೃತ್ತ ನ್ಯಾಯಾಧೀಶರ ನೇಮಕಾತಿಯನ್ನು ರದ್ದುಗೊಳಿಸಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಇವರನ್ನು ರಕ್ಷಿಸುತ್ತಿರುವ ಉದ್ದೇಶವೇನು ;

(ಉ) ಅಪರ ನಿರ್ದೇಶಕರು ಸರ್ಕಾರಿ ಐ.ಟಿ.ಐ.ಗಳಿಗೋಸ್ಕರ ಅನಾವಶ್ಯಕವಾಗಿ ಸುಮಾರು **೧.೬ ಕೋಟಿ** ವೆಚ್ಚದಲ್ಲಿ UPS ಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ ಅಧಿನಿಯಮಗಳು ಮತ್ತು ಖರೀದಿ ನಿಯಮಗಳನ್ನು ಉಲ್ಲಂಘಿಸಿ ನಿಯಮಬಾಹಿರವಾಗಿ ಹೆಚ್ಚಿನ ಬೆಲೆಗೆ ಖರೀದಿಸಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು?

## ಹುಣಸಿನಕೆರೆ ಅಭಿವೃದ್ಧಿಪಡಿಸುವುದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩೭ (೧೮೦೮) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಸನದ ಹುಣಸಿನಕೆರೆಯಲ್ಲಿ ವಿಷಯುಕ್ತ ಆಹಾರ ಪದಾರ್ಥಗಳನ್ನು ಸುರಿದ ಪರಿಣಾಮ ಸಾವಿರಾರು ಮೀನುಗಳ ಮಾರಣ ಹೋಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಆ) ಹುಣಸಿನಕೆರೆಯು ಪುರಾತನ ಕೆರೆಯಾಗಿದ್ದು, ಯಾವಾಗಲೂ ನೀರಿನಿಂದ ತುಂಬಿರುತ್ತದೆ ; ಈ ಕೆರೆಯು ಪಕ್ಷಿಧಾಮವಾಗಿಯೂ ಗುರುತಿಸಿಕೊಂಡಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಹುಣಸಿನಕೆರೆಯ ರಕ್ಷಣೆ, ಸೌಂದರ್ಯೀಕರಣ, ವಾಕಿಂಗ್ ಪಾತ್, ಹೂಳು ತೆಗೆಯುವ ಕಾಮಗಾರಿಗಳನ್ನು ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು ?

## ಕಬಿನಿ ನಾಲೆಯ ದುರಸ್ತಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೩೮ (೧೮೦೦) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಳ್ಳೇಗಾಲ ಹೊರವಲಯದ ಚಿಕ್ಕರಂಗನಾಥ ಕೆರೆಗೆ ನೀರು ಹರಿಸುವ ಕಬಿನಿ ಯೋಜನೆ ನಾಲೆಯು ಕೊಳ್ಳೇಗಾಲ ಪಟ್ಟಣದ ಮಧ್ಯೆ ಹಾದು ಹೋಗುತ್ತಿದ್ದು, ಈ ನಾಲೆಯು ನಿರ್ವಹಣೆ ಇಲ್ಲದ ಕಾರಣ ತ್ಯಾಜ್ಯ ಸಂಗ್ರಹಣೆಯಿಂದ ಕೊಳೆತು ನಾರುತ್ತಿರುವುದು, ಗಿಡಗಂಟಿಗಳು ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ನಾಲೆಯನ್ನು ಸ್ವಚ್ಛಗೊಳಿಸಿ, ಅಭಿವೃದ್ಧಿಪಡಿಸಿ, ತ್ಯಾಜ್ಯ ಹಾಕದ ರೀತಿಯಲ್ಲಿ ಸಂರಕ್ಷಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ; ಈ ಬಗ್ಗೆ ಕೈಗೊಂಡಿರುವ ಅಥವಾ ಕೈಗೊಳ್ಳಲಾಗುವ ಕ್ರಮಗಳೇನು ?

## ಭೂ ಪರಿಮಿತಿ ಕಾಯಿದೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೩೩೯ (೧೮೪೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರವು ನಗರ ಭೂ ಪರಿಮಿತಿ ಕಾಯಿದೆಯನ್ನು ಸಂಖ್ಯೆ: ಯುಡಿಡಿ ೨೫ ಯುಎಲ್‌ಸಿ ೯೯ ಕ್ರಮಾಂಕದ ಸುತ್ತೋಲೆಯಂತೆ ವಾಪಸ್ಸು ಪಡೆದಿರುವುದು ನಿಜವೇ ; ನಿಜವಾಗಿದ್ದಲ್ಲಿ, ವಿವರ ನೀಡುವುದು ;

(ಆ) ಈ ಕುರಿತಂತೆ ಐಎಲ್‌ಆರ್ ೨೦೦೪ ರಂತೆ ಸರ್ವೋಚ್ಚ ನ್ಯಾಯಾಲಯವು ಭೂ ಪರಿಹಾರ ಪಡೆಯದಿರುವ ರೈತರ ಜಮೀನು ವಾಪಸ್ಸು ನೀಡುವಂತೆ ಆದೇಶವಾಗಿರುತ್ತದೆಯೇ ; ಇದ್ದಲ್ಲಿ, ವಿವರ ನೀಡುವುದು ;

(ಇ) ಈ ರೀತಿಯ ಪ್ರಕರಣಗಳಲ್ಲಿ ಜಮೀನುಗಳನ್ನು ಸದರಿ ಭೂ ಮಾಲೀಕರಿಗೆ ಹಿಂತಿರುಗಿಸುವಲ್ಲಿ ಸರ್ಕಾರದ ಅನುಮತಿ ಅನಿವಾರ್ಯವೇ ; ಇದರಿಂದ ಪ್ರಕ್ರಿಯೆ ವಿಳಂಬವಾಗಿ ರೈತರಿಗೆ ತೊಂದರೆಯಾಗುವುದಿಲ್ಲವೇ ;

ಈ) ಈ ರೀತಿಯ ಪ್ರಕರಣಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಜಮೀನು ವಾಪಸ್ಸಾತಿ ಅಧಿಕಾರ ನೀಡಿದಲ್ಲಿ ಆಗುವ ವಿಳಂಬ ತಪ್ಪುವುದಿಲ್ಲವೇ ; ಈ ಕುರಿತು ಸರ್ಕಾರದ ನಿಲುವೇನು ?

## ಸಣ್ಣ ಕೆರೆಗಳ ಅಭಿವೃದ್ಧಿ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೪೦ (೧೮೫೦) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಸಣ್ಣ ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ;

(ಆ) ಈ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಇ) ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಇನ್ನೂ ಎಷ್ಟು ಕೆರೆಗಳ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಬೇಕಾಗಿದೆ ? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

## ಸಿದ್ಧ ಉಡುಪುಗಳ ಕಾರ್ಖಾನೆಗಳು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೩೪೧ (೧೮೨೭) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸಣ್ಣ ಮತ್ತು ಬೃಹತ್ ಹಾಗೂ ಸಿದ್ಧ ಉಡುಪು ಕಾರ್ಖಾನೆಗಳು ಸೇರಿದಂತೆ ಎಷ್ಟು ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ ; ಅವು ಯಾವುವು ; (ಪೂರ್ಣ ವಿವರಗಳನ್ನು ನೀಡುವುದು)

(ಆ) ಈ ಕಾರ್ಖಾನೆಗಳಿಂದ ಪ್ರತಿ ವರ್ಷ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಎಷ್ಟು ಹಾಗೂ ಸರ್ಕಾರ ಕಾರ್ಖಾನೆಗಳಿಗೆ ನೀಡುತ್ತಿರುವ ಸವಲತ್ತುಗಳೇನು ; (ಪೂರ್ಣ ವಿವರಗಳನ್ನು ನೀಡುವುದು)

(ಇ) ಬಹುತೇಕ ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಮಹಿಳಾ ಉದ್ಯೋಗಿಗಳನ್ನು ನೇಮಿಸಿಕೊಳ್ಳಲಾಗಿದ್ದು, ಈ ಮಹಿಳಾ ಉದ್ಯೋಗಿಗಳಿಗೆ ಹಾಗೂ ಇವರ ಮಕ್ಕಳಿಗೆ ಕಾರ್ಖಾನೆಗಳು ನೀಡುತ್ತಿರುವ ಸವಲತ್ತುಗಳೇನು ;

ಈ) ಕಾರ್ಮಿಕ ಇಲಾಖೆಯ ನಿಯಮದಂತೆ ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ನಿಗದಿಪಡಿಸಲಾಗಿರುವ ವೇತನವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರಗಳನ್ನು ನೀಡುವುದು)

ಉ) ಹಾಗಿದ್ದಲ್ಲಿ, ವೇತನ ತಾರತಮ್ಯ ಮಾಡುತ್ತಿರುವ ಹಾಗೂ ಸೌಲಭ್ಯಗಳನ್ನು ಕಲ್ಪಿಸದೇ ಇರುವ ಸಿದ್ಧ ಉಡುಪು ಕಾರ್ಖಾನೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರಗಳನ್ನು ನೀಡುವುದು)

ಊ) ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಇ.ಎಸ್.ಐ. ಮತ್ತು ಪಿ.ಎಫ್. ಕಟಾಯಿಸಲಾಗುತ್ತಿದೆಯೇ ? (ವಿವರಗಳನ್ನು ನೀಡುವುದು)

## ಶ್ರೀದೇವರ ದಾಸಿಮಯ್ಯ ದೇವಸ್ಥಾನದ ಅಕ್ಕಪಕ್ಕದಲ್ಲಿರುವ ಮನೆಗಳ ಸ್ಥಳಾಂತರ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೩೪೨ (೧೮೩೩) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು, ಮುದನೂರು ಗ್ರಾಮದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ ಅಧ್ಯ ವಚನಕಾರರಾದ ಶ್ರೀದೇವರ ದಾಸಿಮಯ್ಯ ದೇವಸ್ಥಾನವಿದ್ದು, ಪ್ರವಾಸಿ ಕೇಂದ್ರದಂತಿರುವ ದೇವಸ್ಥಾನದ ಅಕ್ಕಪಕ್ಕಗಳಲ್ಲಿ ಮನೆಗಳನ್ನು ತೆರವು ಮಾಡಿಸಿ, ಊರಿನ ಪಕ್ಕದಲ್ಲಿ ಮನೆ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆಯೇ ;

(ಆ) ಹಾಗಿದ್ದಲ್ಲಿ, ಈ ಪ್ರಕ್ರಿಯೆ ಯಾವಾಗ ಪ್ರಾರಂಭವಾಯಿತು ; ಇದುವರೆವಿಗೂ ಮನೆಗಳ ನಿರ್ಮಾಣಕ್ಕೆ ಚಾಲನೆ ದೊರಕದಿರಲು ಕಾರಣವೇನು ;

(ಇ) ಈಗಾಗಲೇ ಜಮೀನನ್ನು ಗುರುತಿಸಿದ್ದು, ಇದುವರೆವಿಗೂ ನಿವೇಶನಗಳನ್ನಾಗಿ ಪರಿವರ್ತಿಸದಿರಲು ಕಾರಣವೇನು ;

ಈ) ಎಷ್ಟು ಕಾಲಾವಧಿಯಲ್ಲಿ ನಿವೇಶನಗಳನ್ನಾಗಿ ಪರಿವರ್ತನೆ ಮಾಡಲಾಗುವುದು ;

ಉ) ಮನೆಗಳನ್ನು ನಿರ್ಮಾಣ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ?

## ವಿಧವಾ ವೇತನ, ಅಂಗವಿಕಲರ ವೇತನ ಬಿಡುಗಡೆಯಲ್ಲಿ ವಿಳಂಬ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೩೪೩ (೧೮೫೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರದಿಂದ ನೀಡಲಾಗುವ ವಿಧವಾ ವೇತನ, ಅಂಗವಿಕಲರ ವೇತನ ವೃದ್ಧಾಪ್ಯ ವೇತನ ಇತ್ಯಾದಿ ವೇತನಗಳು ಸರಿಯಾದ ಸಮಯಕ್ಕೆ ಫಲಾನುಭವಿಗಳಿಗೆ ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ವಿಳಂಬವನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆಯೇ ?

## ಕೈಗಾರಿಕಾ ತರಬೇತಿ ಕೇಂದ್ರಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) –**

೩೪೪ (೧೬೯೭) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಇರುವ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು ;

(ಆ) ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ವಿವರ ನೀಡುವುದು ;

(ಇ) ರಾಜ್ಯದಲ್ಲಿ ಸರ್ಕಾರಿ ವೇತನಾನುದಾನಕ್ಕೆ ಒಳಪಡಲು ಅರ್ಹತೆ ಹೊಂದಿರುವ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು ; ಅವು ಯಾವುವು ;

ಈ) ಅರ್ಹತೆ ಹೊಂದಿರುವ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಅನುದಾನ ನೀಡಲು ಸರ್ಕಾರಕ್ಕೆ ಇರುವ ತೊಂದರ ಏನು ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?

## ನೀರು ಬಾರದ ಕೊಳವೆ ಬಾವಿಗಳನ್ನು ಮುಚ್ಚುವುದು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ ) –**

೩೪೫ (೧೮೦೯) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕೊಳವೆ ಬಾವಿಯನ್ನು ತೆರೆಯಲು ಇರುವ ಮಾನದಂಡವೇನು ;

(ಆ) ಕೊರೆದ ಕೊಳವೆ ಬಾವಿಗಳನ್ನು ನೀರು ಬಾರವ ಕಾರಣ ಮುಚ್ಚದಿರುವುದು, ಇತ್ತೀಚೆಗೆ ಸಂಭವಿಸುತ್ತಿರುವ ದುರಂತಗಳು ಸರ್ಕಾರದ ಗಮನದಲ್ಲಿದೆಯೇ ;

(ಇ) ಉಪಯೋಗಿಸದೇ ಇರುವ ಕೊಳವೆ ಬಾವಿಗಳನ್ನು ಮುಚ್ಚಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ8, ಕಾ.ಸೂ. 420 ಪ್ರತಿಗಳು 1500